(ಸಾಕ್ಷಿಯನ್ನು ದಿನಾಂಕ: 14.02.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲುಃ ಶ್ರೀ ಹೆಚ್.ಹೆಚ್.ಎನ್., ಪ್ರತಿವಾದಿಗಳ ಪರ ವಕೀಲರಿಂದಃ**

ಪ್ರತಿವಾದಿ ಮೋಸದಿಂದ ಕ್ರಯಪತ್ರ ಮತ್ತು ಹಕ್ಕು ಖುಲಾಸೆ ಪತ್ರಗಳನ್ನು ಪಡೆದುಕೊಂಡಿರುತ್ತಾರೆಂದು ನಾನು ಹೇಳಿದ್ದು, ಈ ಸಂಬಂಧ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಿನಾಂಕಃ 25.10.2023 ರಂದು ಆರ್.ರಾಘವೇಂದ್ರರವರಿಗೆ ಹಣ ವಾಪಸ್ಸು ನೀಡಿ ಸದರಿಯವರಿಗೆ ಬರೆದುಕೊಟ್ಟ ಕ್ರಯದ ಕರಾರನ್ನು ರದ್ದಾಯಿತಿ ಮಾಡಿಕೊಂಡಿರುತ್ತೇನೆ ಎಂದು ಹೇಳಿದ್ದು, ಈ ಬಗ್ಗೆ ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೀರಾ ಎಂದರೆ ದಾಖಲೆ ಇರುತ್ತದೆ ಆದರೆ ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ.

ರಾವಮಣ್ಣ ರವರ ಮಗ ಆರ್.ರಾಘವೇಂದ್ರರವರಿಂದ ಕ್ರಯದ ರದ್ದಾಯಿತಿ ಪತ್ರವನ್ನು ಬರೆಯಿಸಿಕೊಂಡ ನಂತರ ದಾವಾ ಸ್ವತ್ತುಗಳನ್ನು ನಾನು ಬೇರೆಯವರಿಗೆ ಕ್ರಯ ಮಾಡಿರುತ್ತೇನೆ. ಯಾರಿಗೆ ಕ್ರಯ ಮಾಡಿರುತ್ತೇನೆ ಎಂದರೆ ಸದರಿಯವರ ಪತ್ನಿ ರೂಪರಾಘವೇಂದ್ರರವರಿಗೆ ಕ್ರಯ ಮಾಡಿರುತ್ತೇನೆ ಎಂದು ನುಡಿಯುತ್ತೇನೆ. ನಾನು ರೂಪರಾಘವೇಂದ್ರರವರಿಗೆ ಯಾವುದೇ ಕ್ರಯ ಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯಿಂದ ನಾನು ಹಣ ಪಡೆದುಕೊಂಡು ಸದರಿಯವರಿಗೆ ಹಕ್ಕು ಖುಲಾಸೆ ಪತ್ರ ಮತ್ತು ಕ್ರಯಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕಃ 01.07.2016 ರಂದು ನಾನು ಪ್ರತಿವಾದಿಗೆ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿದ್ದರೂ ಸಹ ಸದರಿಯವರಿಗೆ ಮೋಸ ಮಾಡುವ ಉದ್ದೇಶದಿಂದ ಹಕ್ಕು

ಖುಲಾಸೆ ಪತ್ರ ಬರೆದುಕೊಟ್ಟಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಪ್ರತಿವಾದಿಗೆ ದಾವಾ ಸ್ವತ್ತುಗಳಿಗೆ ಸಂಬಂಧಿಸಿ ಬರೆದುಕೊಟ್ಟ ಹಕ್ಕು ಖುಲಾಸೆ ಪತ್ರ, ಜಿಪಿಎ ಮತ್ತು ಕ್ರಯದ ಕರಾರು ಪತ್ರಗಳನ್ನು ಓದಿಯೇ ಸಹಿ ಮಾಡಿದ್ದು, ಈಗ ದಾವಾ ಸ್ವತ್ತುಗಳನ್ನು ಲಪಟಾಯಿಸುವ ಉದ್ದೇಶದಿಂದ ಸದರಿ ದಾಖಲೆಗಳನ್ನು ಬರೆದು ಕೊಟ್ಟಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಜಿಪಿಎ ಬರೆದುಕೊಡುವ ಎರಡು ವರ್ಷಗಳ ಪೂರ್ವದಲ್ಲಿ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದು ನುಡಿಯುತ್ತೇನೆ. ಸಾಕ್ಷಿ ಸ್ವತಹ ಮುಂದುವರೆದು ಜಿಪಿಎ ದಾಖಲೆಯನ್ನು ಓದಿ ಸಹಿ ಮಾಡಿದ್ದು ಹಕ್ಕು ಖುಲಾಸೆ ಪತ್ರವನ್ನು ಓದದೇ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.